www.ecourtsindia.com



**<u>ದಿನಾಂಕ: 18-01-2025 ರಂದು ಪಿಡಬ್ಲ್ಯೂ -1 ರವರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಗಿದೆ :</u>**

**<u>ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ನಂ.2 ರವರ ಪರ ಶ್ರೀ ಪಿ.ಎನ್.ಎಂ. ವಕೀಲರಿಂದ :</u>**

16. ನನಗೆ ಈಗ ಪ್ರಕರಣ ಸಂಖ್ಯೆ: ಹೆಚ್.ಓ.ಸಿ.ಆರ್.86/1991 ರ ತಹಶೀಲ್ದಾರ್ ರವರ ಆದೇಶದ ನಕಲನ್ನು ತೋರಿಸಲಾಯಿತು. ಸದರಿ ಆದೇಶವು ನನ್ನ ತಂದೆಯಾದ ಮುನಿನಂಜಪ್ಪ ರವರಿಗೆ ಮರುಮಂಜೂರಾತಿ ಆದ ಆಸ್ತಿಗೆ ಸಂಬಂಧಪಟ್ಟ ದಾಖಲೆ ಎಂದರೆ ನಿಜ. **ಸದರಿ ದಾಖಲೆಯನ್ನು ನಿ.ಡಿ.5 ಎಂದು ಗುರುತಿಸಲಾಯಿತು.** ಸದರಿ ನಿ.ಡಿ.5 ರಲ್ಲಿ ಆ ರೀತಿ ಮರುಮಂಜೂರಾತಿ ಆದ ಆಸ್ತಿಯನ್ನು ನಾನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ನಿಜ. ನನಗೆ ಈಗ ಒಂದು ದಾಖಲೆಯನ್ನು ತೋರಿಸಲಾಯಿತು. ಸದರಿ ದಾಖಲೆಯು ದಾವಾ ಐಟಂ ಒಂದು ಸ್ವತ್ತಿಗೆ ಸಂಬಂಧಪಟ್ಟಂತೆ 2 ನೇ ಪ್ರತಿವಾದಿ ನನ್ನ ಅಣ್ಣ ಪಾವತಿ ಮಾಡಿದ ಬಗ್ಗೆ ಸಾಮಾನ್ಯ ರಸೀದಿ ಆಗಿರುತ್ತದೆ ಎಂದರೆ ದಾವಾ ಐಟಂ ಒಂದು ಸ್ವತ್ತಿಗೆ 2 ನೇ ಪ್ರತಿವಾದಿಯೇ ಕಂದಾಯ ಕಟ್ಟಿರಬಹುದು ಆದರೆ ದಾವಾ ಸ್ವತ್ತಿನ ಯಾವುದೇ ದಾಖಲೆಗಳು 2 ನೇ ಪ್ರತಿವಾದಿಯ ಹೆಸರಿನಲ್ಲಿ ಇರುವುದಿಲ್ಲ. **ಸದರಿ ದಾಖಲೆಯನ್ನು ನಿ.ಡಿ.6 ಎಂದು ಗುರುತಿಸಲಾಯಿತು.** ದಾವಾ ಐಟಂ ಒಂದು ಸ್ವತ್ತಿನ ದಾಖಲೆಗಳು 2 ನೇ ಪ್ರತಿವಾದಿಯ ಹೆಸರಿನಲ್ಲಿ ಇರುವುದಿಲ್ಲ ಎಂಬ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನನಗೆ ನಮೂನೆ 11 ಮತ್ತು 9 ರ ದೃಢೀಕೃತ ಪ್ರತಿಯನ್ನು ತೋರಿಸಲಾಯಿತು. ಸದರಿ ದಾಖಲೆಯಂತೆ ದಾವಾ ಐಟಂ ಒಂದು ಸ್ವತ್ತು ಪ್ರತಿವಾದಿ 2 ರವರ ಹೆಸರಿನಲ್ಲಿ ದಾಖಲಾಗಿರುತ್ತದೆ ಎಂದರೆ ಸುಳ್ಳು. **ಸದರಿ ದಾಖಲೆಗಳನ್ನು ನಿ.ಡಿ.7 ಮತ್ತು ನಿ.ಡಿ.8 ಎಂದು ಗುರುತಿಸಲಾಯಿತು.**

17. ನನ್ನನ್ನು ನಮ್ಮ ಊರಿನಲ್ಲಿ ನೀಲ ಮತ್ತು ನೀಲಾವತಿ ಎಂದು ಕರೆಯುತ್ತಾರೆ ಎಂದರೆ ನಿಜ. ನಾನು ಕೆಲವು ದಾಖಲೆಗಳಲ್ಲಿ ನೀಲ ಎಂದು, ಇನ್ನು ದಾಖಲೆಗಳಲ್ಲಿ ನೀಲಾವತಿ ಎಂದು ಮತ್ತು ಇನ್ನು ಕೆಲವು ದಾಖಲೆಗಳಲ್ಲಿ ನೀಲಾವತಿ ಎಂ. ಎಂದು ಸಹಿ ಮಾಡುತ್ತೇನೆ ಎಂದರೆ ನಾನು ನೀಲಾವತಿ ಎಂ. ಎಂದು ಮಾತ್ರ ಸಹಿ ಮಾಡುತ್ತೇನೆ. ನಾನು ವಾದಪತ್ರದಲ್ಲಿ ನೀಲಾವತಿ ಎಂದು ಮತ್ತು ನನ್ನ ಮುಖ್ಯ ವಿಚಾರಣೆಯಲ್ಲಿ ನೀಲಾವತಿ ಎಂ. ಎಂದು ಸಹಿ ಮಾಡಿರುತ್ತೇನೆ ಎಂದರೆ ನಿಜ.

This is a True Copy of the Court Records Online. Authenticated @ districts.ecourtsindia.com/cnr/KABR020012132021/truecopy/order-4.pdf

18. ದಾವಾ ಐಟಂ ನಂ.2 ಸ್ವತ್ತು ನನ್ನ ತಾಯಿಯ ಸ್ವಯಾರ್ಜಿತ ಸ್ವತ್ತು ಆಗಿರುವುದರಿಂದ ಹಾಗೂ 2 ನೇ ಪ್ರತಿವಾದಿ ನನ್ನ ತಾಯಿಯನ್ನು ಪಾಲನೆ ಪೋಷಣೆ ಮಾಡಿ ನೋಡಿಕೊಂಡು ಬಂದ ಕಾರಣ ನನ್ನ ತಾಯಿಯವರು ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ 2 ನೇ ಪ್ರತಿವಾದಿಯ ಹೆಸರಿಗೆ ಮರಣ ಶಾಸನ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸುಳ್ಳು. ಸದರಿ ಮರಣ ಶಾಸನ ಪತ್ರ ಬರೆದುಕೊಡುವ ಪೂರ್ವದಿಂದಲೂ ಈವರೆಗೂ 2 ನೇ ಪ್ರತಿವಾದಿಯೇ ದಾವಾ ಸ್ವತ್ತಿನ ಸ್ವಾಧೀನಹೊಂದಿ ರಾಗಿ ಬೆಳೆ ಬೆಳೆದುಕೊಂಡು ಬರುತ್ತಿದ್ದಾರೆ ಎಂದರೆ ನಾವು ಸಹ ಬೆಳೆಯನ್ನು ಬೆಳೆದುಕೊಂಡು ಬರುತ್ತಿದ್ದೇವೆ. ನಾನು ಮುಂದುವರೆದು ಹೇಳುವುದೇನೆಂದರೆ ಸದರಿ ಸ್ವತ್ತನ್ನು ಹಾಗೆ ಬಿಟ್ಟಿರುವುದರಿಂದ ಬೇರೆಯವರು ಅದನ್ನು ವ್ಯವಸಾಯ ಮಾಡಿ ಬೆಳೆಯನ್ನು ನಮಗೂ ಸಹ ಕೊಡುತ್ತಿದ್ದಾರೆ. ಬೇರೆಯವರಿಗೆ ಆ ರೀತಿ ವ್ಯವಸಾಯ ಮಾಡಲು ಕರಾರಿನ ಮುಖಾಂತರ ಕೊಟ್ಟಿರುತ್ತೀರಾ ಎಂದರೆ ಯಾವುದೇ ಕರಾರು ಮಾಡಿರುವುದಿಲ್ಲ. ನಾನಾಗಲೀ, ನನ್ನ ಸಹೋದರಿಯಾಗಲೀ ದಾವಾ ಐಟಂ ನಂ.2 ಸ್ವತ್ತನ್ನು ಬೆಳೆಯಲು ಬೇರೆಯವರಿಗೆ ಕೊಟ್ಟಿರುವುದಿಲ್ಲ ಬದಲಾಗಿ 2 ನೇ ಪ್ರತಿವಾದಿಯೇ ದಾವಾ ಐಟಂ ನಂ.2 ಸ್ವತ್ತಿನಲ್ಲಿ ಬೆಳೆಯನ್ನು ಬೆಳೆಯುತ್ತಿದ್ದಾರೆ ಎಂದರೆ ಸುಳ್ಳು.

19. ದಾವಾ ಸ್ವತ್ತುಗಳು ಅಲ್ಲದೇ 2 ನೇ ಪ್ರತಿವಾದಿಗೆ ಬೇರೆ ಆಸ್ತಿಗಳು ಇಲ್ಲ ಎಂದರೆ ನಿಜ. 2 ನೇ ಪ್ರತಿವಾದಿ ಅಲ್ಲದೇ ಬೇರೆ ಯಾರು ಅಣ್ಣತಮ್ಮಂದಿರು ನನಗೆ ಇರುವುದಿಲ್ಲ ಎಂದರೆ ನಿಜ. ದಾವಾ ಸ್ವತ್ತುಗಳು ನನ್ನ ತಾಯಿಯ ಸ್ವಯಾರ್ಜಿತ ಸ್ವತ್ತು ಆಗಿರುವುದರಿಂದ ನನ್ನ ತಾಯಿಯವರು ಸದರಿ ಸ್ವತ್ತನ್ನು 2 ನೇ ಪ್ರತಿವಾದಿಗೆ ವಿಲು ನಾಮೆ ಬರೆದುಕೊಟ್ಟ ಕಾರಣ 2 ನೇ ಪ್ರತಿವಾದಿಯು ಮಾಲೀಕರಾಗಿದ್ದು, ನಮಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸುಳ್ಳು. ಸದರಿ ದಾವೆಯು ವಜಾ ಆದರೆ ನನಗೆ ತೊಂದರೆಯಾಗುವುದಿಲ್ಲ ಎಂದರೆ ಸುಳ್ಳು. ನನಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಭಾಗವಿಲ್ಲ ಎಂದರೆ ಸುಳ್ಳು.

ಮರು ವಿಚಾರಣೆ ಇಲ್ಲ.

This is a True Copy of the Court Records Online. Authenticated @ districts.ecourtsindia.com/cnr/KABR020012132021/truecopy/order-4.pdf

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)

ಓ.ಹೇ.ಕೇ.ಸ. ಇದೆ

(ಅಬ್ದುಲ್ ಸಲೀಂ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

www.ecourtsindia.com

This is a True Copy of the Court Records Online. Authenticated @ districts.ecourtsindia.com/cnr/KABR020012132021/truecopy/order-4.pdf